## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.1735/2024

| | | |
|---|---|---|
| ಸಾಕ್ಷಿದಾರರ ಹೆಸರು | : ಜಾಫರ್ ಶರೀಫ್ | ಫ್ರಾಸಾ-4 |
| ತಂದೆಯ ಹೆಸರು | : ಕೆ. ಆಲೀ ಶರೀಫ್ | ಚಾಸಾ-17 |
| ವಯಸ್ಸು | : 45 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಹೆಚ್.ಸಿ.12 | ದಿನಾಂಕಃ10.09.2025. |
| ವಾಸಸ್ಥಳ | : ಗೋಣೀಬೀಡು ಪೋಲೀಸ್ ಠಾಣೆ. | |

### :ಮುಖ್ಯ ವಿಚಾರಣೆಃ ಪ್ರಾಭ್ಯಾ.ಸ.ಸ.ಅ. ರವರಿಂದ:

ನಾನು ದಿ.27.08.2020 ರಿಂದ ದಿ.27.09.2023 ರವರೆಗೂ ಬಾಳೂರು ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.10.07.2023 ರಂದು ನಾನು ಠಾಣಾ SHO ಕರ್ತವ್ಯದಲ್ಲಿ ಇದ್ದಾಗ ಬೆಳಗ್ಗಿನ ಜಾವ 3.15 ರ ಸಮಯಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ವರದಿ, ಮಹಜರ್ ಮತ್ತು ಮುದ್ದೆಮಾಲನ್ನು ಸ್ವೀಕರಿಸಿಕೊಂಡು ಠಾ.ಮೊ.ಸಂ.24/2023 ರಂತೆ ಪ್ರ.ವ.ವರದಿ ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ-1 ರವರು ಹಾಜರುಪಡಿಸಿದ್ದ ಒಂದು ಕಪ್ಪು ಬಣ್ಣದ ಹೋರಿ, ಕಂದು ಬಣ್ಣದ ಒಂದು ಹಸು, KA-13-C-9634 ನೊಂದಣಿ ಸಂಖ್ಯೆಯ ಅಶೋಕ್ ಲೇಲ್ಯಾಂಡ್ ವಾಹನ, 4 ಮೀಟರ್ ಉದ್ದದ ಹಳದಿ ಬಣ್ಣದ ಹಗ್ಗ ಮತ್ತು 5½ ಮೀಟರ್ ಉದ್ದದ ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗವನ್ನು ಠಾ.ಮಾ.ಸಂ.30/2023 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿತರನ್ನು ನಿಯಮಾನುಸಾರ ದಸ್ತಗಿರಿ ಮಾಡಿ ಅವರ ಸ್ವ ಇಚ್ಚಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅದೇದಿನ ಚಾಸಾ-2 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿತರನ್ನು ರಿಮ್ಯಾಂಡ್ ಮನವಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನ್ಯಾಯಾಲಯದ ಆದೇಶದಂತೆ ಪ್ರಕರಣದಲ್ಲಿ ವಶಕ್ಕೆ ಪಡೆಯಲಾದ ಎರಡು ಗೋವುಗಳನ್ನು ಅರಸೀಕೆರೆಯ ಕುಸ್ತೂರಬಾ ಗೋಶಾಲೆಗೆ ಚಾಸಾ-13 ರವರ ಮೂಲಕ ಹಸ್ತಾಂತರಿಸಿರುತ್ತೇನೆ. ದಿ.17.07.2023 ರಂದು ಚಾಸಾ-15 ರವರಿಗೆ ಪತ್ರ ಬರೆದುಕೊಂಡು ದಾಳಿ ಕಾಲಕ್ಕೆ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ದೃಢೀಕರಣ ನೀಡುವಂತೆ ಕೋರಿರುತ್ತೇನೆ. ದಿ.23.07.2023 ರಂದು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಕಲಂ.5, 12(2) ನ್ನು ತನಿಖೆಗೆ ಅಳವಡಿಸಿಕೊಳ್ಳಲು ಅನುಮತಿ ಕೋರಿ ನ್ಯಾಯಾಲಯಕ್ಕೆ ಮನವಿ ಪತ್ರ ನಿವೇದಿಸಿಕೊಂಡು ಅನುಮತಿ ಪಡೆದಿರುತ್ತೇನೆ. ದಿ.24.07.2023 ರಂದು ಆರೋಪಿತರು ಜಾಮೀನು ಆದೇಶದೊಂದಿಗೆ ಠಾಣೆಗೆ ಹಾಜರಾಗಿದ್ದು ವಶಪಡಿಸಿಕೊಂಡ ವಾಹನವನ್ನು 1 ನೇ ಆರೋಪಿಗೆ ಬಿಟ್ಟುಕೊಟ್ಟಿರುತ್ತೇನೆ. ನಂತರ ವೃತ್ತ ನಿರೀಕ್ಷಕರಿಗೆ ಪತ್ರ ಬರೆದುಕೊಂಡು PSI ದರ್ಜೆಯ ಅಧಿಕಾರಿಯನ್ನು ತನಿಖಾಧಿಕಾರಿಯಾಗಿ ನೇಮಕ ಮಾಡುವಂತೆ ಪತ್ರ ಬರೆದುಕೊಂಡಿರುತ್ತೇನೆ. ದಿ.21.08.2023 ರಂದು CPI ರವರ ಆದೇಶದಂತೆ ಪ್ರಕರಣದ ಕಡತವನ್ನು ಚಾಸಾ-18 ರವರಿಗೆ ಮುಂದಿನ ತನಿಖೆ ಸಂಬಂಧ ನೀಡಿರುತ್ತೇನೆ.

ಸಾಕ್ಷಿಯು ನಿಪಿ-1 ರ ದೂರು ಮತ್ತು ನಿಪಿ-2 ರ ಪ್ರ.ವ.ವರದಿಯಲ್ಲಿ ತಮ್ಮ ಸಹಿಗಳನ್ನು

ಗುರುತಿಸಿ, ನಿಪಿ-4 ರಿಂದ 11 ರ ಪೋಟೋಗಳಲ್ಲಿ ಕಾಣುವ ಜಾನುವಾರು, ವಾಹನ ಮತ್ತು ಹಗ್ಗಗಳನ್ನು ಮಾಲುಪಟ್ಟಿಗೆ ಅಳವಡಿಸಿದ ಬಗ್ಗೆ ಗುರುತಿಸುತ್ತಾರೆ. ನಿಪಿ-1 ಮತ್ತು 2 ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.10.07.2023 ರ ಮನವಿ ಪತ್ರ, ದಿ.24.07.2023 ರ ಮನವಿ ಪತ್ರ, CPI ರವರ ಜ್ಞಾಪನ ಮತ್ತು KPTCL ರವರಿಗೆ ಬರೆದುಕೊಂಡ ಪತ್ರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-12 ರಿಂದ 15, ಸಾಕ್ಷಿಯ ಸಹಿಗಳನ್ನು ನಿಪಿ-12(ಎ) ರಿಂದ 15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎಂ.ಒ.1 ರಿಂದ 3 ವಸ್ತುಗಳು ಹಾಗೂ 1 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. 2 ನೇ ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಕೆ.ಡಿ. ವಕೀಲರಿಂದಃ</u>**

ಆರೋಪಿತರಿಗೆ ಪ್ರ.ವ.ವರದಿಯ ನಕಲನ್ನು ಕೊಟ್ಟಿಲ್ಲ. ನನ್ನ ಸಮಕ್ಷಮ ಹಾಜರುಪಡಿಸಿದ್ದರು ಎಂದು ಹೇಳಲಾದ ಜಾನುವಾರುಗಳ ವಯಸ್ಸು ತಿಳಿದುಕೊಂಡು ವೈದ್ಯಕೀಯ ಪರೀಕ್ಷೆ ಮಾಡಿಸಿಲ್ಲ. ಸದರಿ ಜಾನುವಾರುಗಳನ್ನು ಠಾಣಾ ಆವರಣಕ್ಕೆ ಕರೆದುಕೊಂಡು ಬಂದಾಗ ಪೋಟೋಗಳನ್ನು ತೆಗೆಯಲಾಗಿದೆ. ನಾನು ಹೇಳಿದಂತೆ ಯಾರ ಹೇಳಿಕೆಯನ್ನು ಸಹಾ ದಾಖಲು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಪತ್ರವ್ಯವಹಾರಗಳನ್ನು ಮಾಡದೇ ಇದ್ದರೂ ಈ ಸಂಬಂಧ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಗುರುತಿಸಿರುವ ಎಲ್ಲಾ ದಾಖಲೆಗಳನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.